# ಶ್ರೀಮಾತೆಯವರ ಸ್ಮೃತಿ

ಆಂಗ್ಲ ಮೂಲ: **ಮೋಹಿನೀ ಮೋಹನ ಮುಖರ್ಜಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ನಾನು ಕಲ್ಕತ್ತೆಯಲ್ಲಿರುವ ಬಾಗ್‌ಬಜಾರಿನ 'ಉದ್ಬೋಧನ'ದಲ್ಲಿ ಶ್ರೀಮಾತೆಯವರನ್ನು ಮೊದಲ ಬಾರಿ ಭೇಟಿಯಾದುದು ೧೯೦೯ ಅಥವಾ ೧೯೧೦ರಲ್ಲಿ. ಆಗ ನನಗೆ ಹನ್ನೆರಡು ವರ್ಷ ವಯಸ್ಸು. ಆಗ ನಾನು ಕಲ್ಕತ್ತೆಯಿಂದ ಹನ್ನೆರಡು ಮೈಲಿ ದೂರದ ಒಂದು ಹಳ್ಳಿಯಲ್ಲಿ , ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದೆ. ಒಂದು ಶನಿವಾರದಂದು ಸಾಯಂಕಾಲ, ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದ ನನ್ನ ಸ್ನೇಹಿತನೊಬ್ಬನ ಜೊತೆಗೆ ನಾನು 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಹೋದೆ. ಶ್ರೀಮಾತೆಯವರ ಈ ಶಿಷ್ಯನು ನಮ್ಮ ಗ್ರಾಮದಲ್ಲೆಲ್ಲ ಹೆಚ್ಚಾಗಿ ರಾಮಕೃಷ್ಣ ಮಿಷನ್ನಿನ ಆದರ್ಶಗಳನ್ನು ಪ್ರಚಾರ ಮಾಡುತ್ತಿದ್ದ. ಶ್ರೀಮಾತೆಯವರಿಗೆ ಸಾಷ್ಟಾಂಗ ಪ್ರಣಾಮ ಮಾಡುವಾಗ ನನ್ನ ಮನಸ್ಸಿನ ತುಂಬ ಒಂದು ರೀತಿಯ ಭಯ ಆವರಿಸಿಕೊಂಡಿತ್ತು. ಶ್ರೀಮಾತೆಯವರು ಮುಖದ ಮೇಲೆ ಸೆರಗೆಳೆದುಕೊಂಡಿದ್ದರು; ತಮ್ಮ ಪಾದಗಳನ್ನು ನೆಲದ ಮೇಲಿಟ್ಟುಕೊಂಡು ಅವರು ಮಂಚದ ಮೇಲೆ ಕುಳಿತಿದ್ದರು. ಅವರ ಪಕ್ಕದಲ್ಲಿ ಒಬ್ಬಾಕೆ ವೃದ್ಧ ಮಹಿಳೆ ನಿಂತುಕೊಂಡಿದ್ದಳು. ನಾನು ಶ್ರೀಮಾತೆಯವರ ಪಾದಗಳಿಗೆ ತಲೆಯನ್ನು ಸ್ಪರ್ಶಿಸಿ, ಮೇಲಕ್ಕೆದ್ದು ನೋಡಿದಾಗ ಅವರು ತಮ್ಮ ಮುಖದ ಮೇಲಿನ ಸೆರಗನ್ನು ತುಸು ಸರಿಸಿ, ಮೃದುವಾಗಿ ನಕ್ಕರು. ಅವರ ಆ ನಗು ಈ ಭೂಮಿಯ ಎಲ್ಲವನ್ನೂ ಮೀರಿದ್ದಾಗಿತ್ತು ಎಂದು ಆಗ ನನಗನ್ನಿಸಿತು. ಅವರ ಬಳಿ ಯಾವ ಮಾತುಕತೆಯೂ ನಡೆಯಲಿಲ್ಲ. ಬಳಿಕ ನಾನು ಅವರ ಕೋಣೆಯಿಂದ ಹೊರಗೆ ಬಂದು, ಮೆಟ್ಟಿಲಿಳಿದು ಬಂದೆ. ಆ ಕೆಲವು ಕ್ಷಣಗಳಲ್ಲಿ ಶ್ರೀಮಾತೆಯವರ ಪ್ರೀತಿಯ ನೋಟ ನನ್ನ ಮನಸ್ಸನ್ನು ಹೇಗೆ ಆವರಿಸಿಬಿಟ್ಟಿತ್ತೆಂದರೆ, ನನ್ನ ಮನಸ್ಸಿನಲ್ಲಿ ಈಗಲೂ ಅದು ಜೀವಂತವಾಗಿ ನೆಲೆನಿಂತಿದೆ.

ಮನೆಗೆ ಮರಳಿ ಬಂದ ಮೇಲೆ ಶ್ರೀಮಾತೆಯವರನ್ನು ಮತ್ತೆ ಭೇಟಿಯಾಗಬೇಕೆಂಬ ಪ್ರಬಲವಾದ ಆಸೆ ನನ್ನ ಮನಸ್ಸಿನಲ್ಲಿ ಮೂಡಿತು. ಕೆಲವು ತಿಂಗಳ ಬಳಿಕ ಅವರನ್ನು ಕಾಣುವ ಒಂದು ಸೌಭಾಗ್ಯ ಲಭಿಸಿತು. ಈ ಬಾರಿ ಅವರು ನನ್ನ ಬಳಿ ಒಂದೆರಡು ಮಾತುಗಳನ್ನು ಆಡಿದರು, ಅದು ನನ್ನ ಆರೋಗ್ಯ ಹಾಗೂ ಓದು ಬರಹದ ಬಗೆಗೆ ಆಗಿತ್ತು. ಆದರೆ ಅವರತ್ತ ನನಗೆ ಉಂಟಾಗಿದ್ದ ಸೆಳೆತ ಇನ್ನಷ್ಟು ಹೆಚ್ಚತೊಡಗಿದೆಯೆಂದು ನನಗೆ ಚೆನ್ನಾಗಿ ಅನುಭವಕ್ಕೆ ಬಂತು. ನನ್ನ ಮೇಲೆ ಅವರಿಗಿದ್ದ ಆಳವಾದ ನೀರವ ಸ್ನೇಹವೇ ಇದಕ್ಕೆ ಮೂಲವೆಂದು ನನಗನ್ನಿಸಿತು.

ಎರಡು-ಮೂರು ವರ್ಷಗಳು ಕಳೆದವು. ಈ ಅವಧಿಯಲ್ಲಿ ನಾನು ಕೆಲವು ಬಾರಿ ಶ್ರೀಮಾತೆಯವರನ್ನು ಭೇಟಿಯಾದೆ. ೧೯೧೨ರ



ಬೇಸಿಗೆಯಲ್ಲಿ, ಒಂದು ಶನಿವಾರದಂದು ಸಾಯಂಕಾಲ ನಾನು ಶ್ರೀಮಾತೆಯವರ ಬಳಿಗೆ ಹೋದೆ. ಅವರಿಗೆ ಪ್ರಣಾಮ ಮಾಡಿ, ನನ್ನ ಅಂತರಂಗದ ಬಯಕೆಯನ್ನು ಅವರ ಬಳಿ ಹೇಳಿಕೊಂಡೆ. ಬಳಿಕ ಮೆಟ್ಟಲಿಳಿದು ಬಂದಾಗ ನನಗೆ ಪರಿಚಯವಿದ್ದ ಹಿರಿಯರೊಬ್ಬರು ಸಿಕ್ಕಿದರು. ಅಂದು ರಾತ್ರಿ ಅವರ ಮನೆಯಲ್ಲಿ ತಂಗಲು ಅವರು ಹೇಳಿದರು. ನಾವಿಬ್ಬರೂ ಶ್ರೀಮಾತೆಯವರ ಸೇವಕರಾಗಿದ್ದ ಸ್ವಾಮಿ ಧೀರಾನಂದರೊಡನೆ ಗಂಗಾನದಿಯ ತೀರದವರೆಗೆ ನಡೆದುಕೊಂಡು ಹೋದೆವು. ಇಳಿಜಾರಾಗಿದ್ದ, ಹುಲ್ಲು ಹಾಸಿನಿಂದ ಕೂಡಿದ್ದ ನದೀದಡದಲ್ಲಿ ಕುಳಿತು ನಾವೆಲ್ಲ ಬೇಲೂರು ಮಠದ ಬಗ್ಗೆ, ವ್ಯಕ್ತಿತ್ವ ನಿರ್ಮಾಣದ ಬಗ್ಗೆ ಬಹಳ ಹೊತ್ತು ಮಾತನಾಡತೊಡಗಿದೆವು. ಸ್ವಾಮಿ ಧೀರಾನಂದರು ನನ್ನೊಂದಿಗೆ ವಿಶೇಷ ಕಾಳಜಿ ತೋರಿಸುತ್ತ, ತಮಗೆ ತೀರ ಆತ್ಮೀಯನೆಂಬಂತೆ ಭಾವಿಸಿ ಮಾತನಾಡುತ್ತಿದ್ದರು. ಅನೇಕ ಸಲ ಅವರ ಬಳಿ ನನಗೆ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯುವ ಬಗ್ಗೆ ಕೇಳಬೇಕೆನಿಸಿತ್ತು; ಆದರೆ ಅದನ್ನು ಕೇಳಲು ನನಗೆ ಅವಕಾಶ ಸಿಗಲಿಲ್ಲ. ಭಾನುವಾರ ನಾನು ನನ್ನ ಹಳ್ಳಿಗೆ ಹಿಂದಿರುಗಿದೆ. ಅಲ್ಲಿಂದ ಅವರಿಗೊಂದು ಪತ್ರ ಬರೆದೆ, ಅದರಲ್ಲಿ ದೀಕ್ಷೆ ಪಡೆಯಲು ಅವರ ನೆರವನ್ನು ಕೋರಿದೆ. ಆರು ಅಥವಾ ಏಳು ದಿನಗಳ ನಂತರ ಶ್ರೀಮಾತೆಯವರ ಒಪ್ಪಿಗೆಯೊಂದಿಗೆ ಅವರ ಉತ್ತರ ಬಂತು.

ಶ್ರೀಮಾತೆಯವರು ದೀಕ್ಷೆಯ ದಿನ ಹಾಗೂ ಸಮಯವನ್ನು ನಿಗದಿಪಡಿಸಿದ್ದು, ಅಂದು ಬಾಗ್‌ಬಜಾರಿಗೆ ಹೋಗಲು ನನಗೆ ತಿಳಿಸಿದ್ದರು. ಈ ಹಿಂದೆ ನಾನು 'ಉದ್ಬೋಧನ'ದಲ್ಲಿ ಭೇಟಿಯಾಗಿದ್ದ ಹಿರಿಯ ವ್ಯಕ್ತಿಗೆ ನಾನು ಆ ಪತ್ರವನ್ನು ತೋರಿಸಿದೆ. ಅದನ್ನು ಬೇರೆ ಯಾರಿಗೂ ತಿಳಿಸಿರಲಿಲ್ಲ. ಅವರು ತುಂಬ ಸಂತೋಷಪಟ್ಟರು. ಶ್ರೀಮಾತೆಯವರ ಸೇವಕರಾಗಿದ್ದ ಕೃಷ್ಣಲಾಲ್ ಮಹಾರಾಜರು ನನ್ನ ಆ ಪತ್ರವನ್ನು ಪಡೆದ ಬಳಿಕ ಈ ಹಿರಿಯರ ಬಳಿ ನನ್ನ ಸ್ವಭಾವ ಹೇಗೆ ಇತ್ಯಾದಿಗಳ ಬಗ್ಗೆ ವಿಚಾರಿಸಿದರಂತೆ. ಅದಲ್ಲದೆ, ಇಷ್ಟು ಎಳೆಯವಯಸ್ಸಿನಲ್ಲೇ ಶ್ರೀಮಾತೆಯವರಿಂದ ದೀಕ್ಷೆ ಪಡೆಯಲು ನಾನು ಬಹಳ ಅದೃಷ್ಟಶಾಲಿಯೆಂದೂ ಅವರು ತಿಳಿಸಿದರು; ಹಾಗೂ ಇನ್ನೂ ಕೆಲವು ಬಹಳ ಮುಖ್ಯವಾದ ಮಾರ್ಗದರ್ಶನಗಳನ್ನು ಅವರು ನೀಡಿದರು. ಆಗ ಇಡೀ ಪ್ರಪಂಚದ ತಾಯಿಯಾದ ಶ್ರೀಮಾತೆಯವರಿಂದ ನಾನು ದೀಕ್ಷೆ ಪಡೆಯಲಿದ್ದೇನೆ ಎಂಬ ಸಂಗತಿ ನನಗೆ ಸ್ವಲ್ಪವೂ ತಿಳಿದಿರಲಿಲ್ಲ. ಅವರು ನನ್ನ ತಾಯಿ; ನನ್ನ ಗುರುವಾಗಿ ಅವರು ನನ್ನನ್ನು ಜೀವನಪರ್ಯಂತವೂ ರಕ್ಷಿಸುವರು– ಈ ಭಾವನೆಯಷ್ಟೇ ಆಗ ನನಗಿದ್ದುದು. ಈಚೆಗೆ ನಾನು ಈ ಭಾವನೆಯ ಬಗ್ಗೆ ಆಲೋಚಿಸುವಾಗ ನನಗನ್ನಿಸುತ್ತದೆ, ಮಾನವನು ಬದುಕಿರುವುದಿದ್ದರೆ ಇದಕ್ಕಾಗಿ ಮಾತ್ರ ಸಾಕಲ್ಲವೇ– ಬೇರೇನೂ ಬೇಕಾಗಿಲ್ಲ– ಎಂದು. ನಿಗದಿಯಾದ ದಿನದಂದು, ಹೇಳಿದ ಸಮಯಕ್ಕೆ ಸರಿಯಾಗಿ ನಾನು ಬಾಗ್‌ಬಜಾರ್ ತಲುಪಿದೆ. ಸ್ವಾಮಿ ಧೀರಾನಂದರ ಪ್ರೀತಿ ಹಾಗೂ ಅನುಕಂಪಗಳಿಂದಾಗಿ ನನಗೆ ಮಂತ್ರದೀಕ್ಷೆ ಲಭಿಸಿತು. ಶ್ರೀಮಾತೆಯವರು ಪೂಜೆ ಮುಗಿಸಿದ ಬಳಿಕ ದೇವರ ಕೋಣೆಯಲ್ಲಿ ನನಗೋಸ್ಕರ ಕಾದು ಕುಳಿತಿದ್ದರು. ಆ ಕೋಣೆಯನ್ನು ಪ್ರವೇಶಿಸುವಾಗ ನನಗೆ ತುಂಬಾ ಭಯವುಂಟಾಯಿತು. ಆ ದಿನ ಮೊದಲ ಬಾರಿ ದೀಕ್ಷೆ ಪಡೆದವನೇ ನಾನು. ಅವರ ಬಳಿಗೆ ಹೋದ ಕೂಡಲೇ ನನ್ನ ಭಯವೆಲ್ಲ ಹೊರಟುಹೋಯಿತು. ಮನೆಯಲ್ಲಿ ನನ್ನ ತಾಯಿಯೊಂದಿಗೆ ಮಾತನಾಡುವಂತೆ ಅವರೊಂದಿಗೆ ಮಾತನಾಡಿದೆ. ಅವರು ತಮ್ಮ ಎಡ ಭಾಗದಲ್ಲಿದ್ದ ಒಂದು ಆಸನದ ಮೇಲೆ ಕುಳಿತುಕೊಳ್ಳಲು ನನಗೆ ಹೇಳಿದರು. ಆಗ ನಾನು ಗಮನಿಸಿದೆ, ಅವರಲ್ಲಿ ಭಾವಪರಿವರ್ತನೆ ಉಂಟಾಗಿತ್ತು. ಅವರ ಸುತ್ತ ಒಂದು ದಿವ್ಯಪ್ರಭೆ ಆವರಿಸಿಕೊಂಡಿತ್ತು; ಅವರ ಮುಖದಿಂದ ಅದೇ ಮಾಧುರ್ಯ, ಅದೇ ದಿವ್ಯ ಆನಂದ ಹೊರಹೊಮ್ಮುತ್ತಿತ್ತು. ಈ ಮೊದಲು ಅದನ್ನು ನಾನು ಗಮನಿಸಿರಲಿಲ್ಲ. ಅವರು ಒಂದೆರಡು ಸಲ ತಮ್ಮ ಕೈಗಳನ್ನು ನನ್ನ ತಲೆಯಿಂದ ಬೆನ್ನೆಲುಬಿನ ಕಡೆಗೆ ಕೆಳಕ್ಕೆ ಸವರಿ, 'ಓ! ಎಷ್ಟು ಸಣ್ಣ ವಯಸ್ಸು ನಿನ್ನದು, ಮಗೂ!' ಎಂದರು. ಬಹುಶಃ ನಾನು ದುಃಖ–ಸಂಕಟಗಳಿಂದ ತುಂಬಿದ ಈ ಪ್ರಪಂಚದಲ್ಲಿದ್ದುಕೊಂಡು, ಅಗಾಧ ಕಷ್ಟಕೋಟಲೆಗಳನ್ನು ಅನುಭವಿಸಬೇಕಾಗುವುದು ಎಂದು ಅವರಿಗೆ ದಿವ್ಯದೃಷ್ಟಿಯಿಂದ ಕಂಡಿರಬೇಕು. ನಾನು ಭೇಟಿಯಾಗಿದ್ದ ಹಿರಿಯರು ನನಗೆ ತಿಳಿಸಿಕೊಟ್ಟಿದ್ದಂತೆ; ನಾನು ಬೆಳ್ಳಿಯ ಒಂದು ರೂಪಾಯಿ ನಾಣ್ಯವನ್ನು ಶ್ರೀಮಾತೆಯವರಿಗೆ ದಕ್ಷಿಣೆ ಕೊಡಲೆಂದು ತೆಗೆದುಕೊಂಡು ಹೋಗಿದ್ದೆ. ನಾನು ಅವರಿಗೆ ನಮಸ್ಕರಿಸಿ, ಆ ನಾಣ್ಯವನ್ನು ಹೊರತೆಗೆದಾಗ ಅವರೆಂದರು, 'ಬೇಡ, ಬೇಡ ಮಗೂ. ನೀನು ಅದನ್ನು ಕೊಡಬೇಕಾಗಿಲ್ಲ, ಮಗೂ, ನಿನಗೆಲ್ಲಿ ದುಡ್ಡು ಸಿಗುತ್ತದೆ? ನೀನಿನ್ನೂ ಶಾಲೆಯ ವಿದ್ಯಾರ್ಥಿ. ಇನ್ನೂ ನಿನಗೆ ಸಣ್ಣ ವಯಸ್ಸು. ಈ ಅಳಲೆಕಾಯಿ ತೆಗೆದುಕೋ. ಅದನ್ನೇ ನನಗೆ ದಕ್ಷಿಣೆಯಾಗಿ ಕೊಡು.' ಆಗ ನಾನೆಂದೆ, 'ಇಲ್ಲಮ್ಮಾ. ನೀವು ಇದನ್ನು ಸ್ವೀಕರಿಸಬೇಕು. ನಾನು ಇದನ್ನು ನಿಮಗಾಗಿ ಸಂಗ್ರಹಿಸಿ ಇಟ್ಟುಕೊಂಡಿದ್ದೆ.' ಅಷ್ಟರಲ್ಲಿ ಸ್ವಾಮಿ ಧೀರಾನಂದರು ಬಾಗಿಲನ್ನು ತೆರೆದು ಒಳಗೆ ಬಂದುಬಿಟ್ಟಿದ್ದರು. ಅವರು ಹೊರಗಿನಿಂದಲೇ ನಮ್ಮ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದರು. ನಾನು ಅವರತ್ತ ನೋಡಿದಾಗ ಅವರು ನನ್ನತ್ತ ಕಣ್ಣುಸನ್ನೆ ಮಾಡಿ, ಅಳಲೆಕಾಯಿಯೊಂದಿಗೆ ಆ ನಾಣ್ಯವನ್ನು ಶ್ರೀಮಾತೆಯವರ ಮುಂದಿಡಲು ತಿಳಿಸಿದರು. ಕೂಡಲೇ ನಾನು ಅದೇ ರೀತಿ ಮಾಡಿದೆ. ಆಗ ಸ್ವಾಮೀಜಿ ಮುಂದೆ ಬಂದರು; ಶ್ರೀಮಾತೆಯವರು ಆ ನಾಣ್ಯವನ್ನು ಅವರಿಗೆ ಕೊಟ್ಟರು. ಸ್ವಾಮೀಜಿ, 'ಈ ಹಣವನ್ನು ಠಾಕೂರರ (ಶ್ರೀರಾಮಕೃಷ್ಣರ) ಪೂಜೆಗೆ ಬಳಸಿಕೊಳ್ಳಲಾಗುವುದು' ಎಂದರು. ಶ್ರೀಮಾತೆ ಮೆಲುನಗೆ ನಕ್ಕರು. ಬಳಿಕ ಗಂಗಾಜಲದಿಂದ ಕೈತೊಳೆದು ಸುಮ್ಮನೆ ಕುಳಿತರು. ನನಗೆ ಪ್ರಸಾದ ಕೊಡುವಂತೆ ಕೃಷ್ಣಲಾಲ್ ಮಹಾರಾಜರಿಗೆ ಹೇಳಿದರು. ನಾನು ಶ್ರೀಮಾತೆಯವರ ಪಾದಗಳ ಮೇಲೆ ತಲೆಯನ್ನಿಟ್ಟು ನಮಸ್ಕರಿಸಿ, ಅವರ ಕೋಣೆಯಿಂದ ಹೊರಬಂದೆ. ಸಮೀಪದ ವರಾಂಡದಲ್ಲಿ ನಿಂತುಕೊಂಡು ಪ್ರಸಾದವನ್ನು ಸ್ವೀಕರಿಸಿದೆ. ಅನಂತರ ಕೆಲವರನ್ನು ಕೃಷ್ಣಲಾಲ್ ಮಹಾರಾಜ್ ಒಬ್ಬೊಬ್ಬರನ್ನಾಗಿ ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದರು. ನಾನು ಶ್ರೀಮಾತೆಯವರ ಬಳಿ ಹದಿನೈದು ನಿಮಿಷಗಳವರೆಗೆ ಇದ್ದೆ. ಅಲ್ಲಿಂದ ಹೊರಬಂದಾಗ ನಾನು ಆನಂದ ಸಾಗರದಲ್ಲಿ ಈಜಾಡುವಂತೆ ಅನ್ನಿಸುತ್ತಿತ್ತು. ಮನೆಗೆ ಹಿಂದಿರುಗುವುದಕ್ಕೆ ಮೊದಲು ನಾನು ಅಲ್ಲೇ ಊಟ ಮಾಡಬೇಕೆಂದೂ, ಶ್ರೀಮಾತೆಯವರ ಪ್ರಸಾದವನ್ನು ಸ್ವೀಕರಿಸಬೇಕೆಂದೂ ತಮ್ಮ ಕೋಣೆಯಿಂದ ಹೊರಗೆ ಬರುವ ಮುನ್ನ ಶ್ರೀಮಾತೆಯವರು ನನಗೆ ಹೇಳಿದ್ದರು. ಮುಖ್ಯದ್ವಾರದ ಬಳಿಯಲ್ಲಿದ್ದ ಒಂದು ಕೋಣೆಯಲ್ಲಿ ನಾನು ಕಾಯುತ್ತಿದ್ದೆ. ಅಷ್ಟರಲ್ಲಿ ನಾನು ಬಲರಾಮ ಬಾಬುಗಳ ಮಗ ರಾಮಕೃಷ್ಣ ಬಾಬುವನ್ನು ಕಂಡೆ. ಅವರು ನನ್ನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು, ಮುಂದಿನ ಕೆಲವು ವರ್ಷಗಳಲ್ಲಿ ನಾನು ರಾಮಕೃಷ್ಣ ಮಹಾಸಂಘಕ್ಕೆ ಸೇರಿಕೊಂಡರೆ ತಮಗೆ ಸಂತಸವುಂಟಾಗುವುದು ಎಂದರು. ಆದರೆ, ಅಯ್ಯೋ! ಹಾಗಾಗಲಿಲ್ಲ. ಶ್ರೀಮಾತೆಯವರು ಬೇರೆ ರೀತಿ ಆಗಬೇಕೆಂದು ಬಯಸಿದ್ದರು. ಒಂದೂವರೆ ಗಂಟೆಯ ಹೊತ್ತಿಗೆ ಪ್ರಸಾದ (ಮಧ್ಯಾಹ್ನದ ಊಟ) ಸ್ವೀಕರಿಸಲು ನನ್ನನ್ನು ಕರೆದರು. ಭೋಜನಾಲಯ ಭರ್ತಿಯಾಗಿತ್ತು. ಸ್ವಾಮಿ ಶಾರದಾನಂದ, ಸ್ವಾಮಿ ಧೀರಾನಂದ, ರಾಮ

ಕೃಷ್ಣ ಬಾಬು ಮುಂತಾದವರೊಂದಿಗೆ ಊಟ ಮಾಡುವ ಅದೃಷ್ಟ ನನ್ನದಾಗಿತ್ತು. ಎಲ್ಲರೂ ತಮ್ಮತಮ್ಮ ಸ್ಥಳದಲ್ಲಿ ಕುಳಿತ ಮೇಲೆ ನಾನು ಶ್ರೀಮಾತೆಯವರನ್ನು ಮತ್ತೊಮ್ಮೆ ಅಲ್ಲಿ ಕಂಡೆ. ಅವರು ಬಾಗಿಲ ಬಳಿ ಬಂದು, ತಮ್ಮ ಪ್ರಸಾದವನ್ನು ಒಬ್ಬಾಕೆ ವಿಧವೆಗೆ ನೀಡಿ, ನನ್ನತ್ತ ಕೈತೋರಿಸಿ, ಅದನ್ನು ನನಗೆ ನೀಡಲು ಹೇಳಿದರು: ''ಅಗೋ, ಆ ಹುಡುಗನಿಗೆ ಇದನ್ನು ಕೊಡು.'' ಆಗ ಎಲ್ಲರೂ ನನ್ನತ್ತ ನೋಡಿದರು, ಶರತ್ ಮಹಾರಾಜರೂ (ಸ್ವಾಮಿ ಶಾರದಾನಂದರು) ನನ್ನತ್ತ ನೋಡಿ ನಸುನಕ್ಕರು. ನನಗೆ ತುಸು ನಾಚಿಕೆಯುಂಟಾಯಿತು.

ಹೇಗೆ ಧ್ಯಾನ ಮಾಡಬೇಕೆಂದು ಶ್ರೀಮಾತೆಯವರು ನನಗೆ ಸೂಚಿಸಿದ್ದರು. ಆದರೂ ನಾನು ಕೇಳಿದ್ದೆ: 'ನಾನು ನಿಮ್ಮನ್ನು ಕುರಿತು ಧ್ಯಾನಿಸಬೇಕೆ?' ಅದಕ್ಕೆ ಅವರು ಉತ್ತರ ಕೊಟ್ಟರು: 'ಅಂಥದ್ದನ್ನೇನೂ ನೀನು ಮಾಡಬೇಕಾಗಿಲ್ಲ. ನಿನ್ನ ಇಷ್ಟದೇವತೆಯ ಮೇಲೆ ಧ್ಯಾನ ಮಾಡು. ಅದರಲ್ಲೇ ಎಲ್ಲವೂ ಸೇರಿಕೊಂಡಿದೆ.' ಶ್ರೀಮಾತೆಯವರ ನಿರಹಂಕಾರ ಭಾವವನ್ನು ಸೂಚಿಸುವ ಹತ್ತು ಹಲವು ನಿದರ್ಶನಗಳಲ್ಲಿ ಇದೂ ಒಂದು.

ಶ್ರೀಮಾತೆಯವರ ಮನೆ 'ಉದ್ಬೋಧನ'ವನ್ನು ಬಿಡುವ ಮುನ್ನ ಇನ್ನೊಂದು ಬಾರಿ ನಾನು ಶ್ರೀಮಾತೆಯವರ ಬಳಿಗೆ ಹೋದೆ. ನಾನು ಕೇಳಿದೆ: 'ಅಮ್ಮಾ, ನೀವು ನನಗೆ ಬೆಳಿಗ್ಗೆ ಮತ್ತು ಸಾಯಂಕಾಲ ಕನಿಷ್ಠ ೧೦೮ ಬಾರಿ ಮಂತ್ರ ಜಪ ಮಾಡಬೇಕು ಎಂದು ಹೇಳಿದ್ದೀರಿ; ನಡುವೆ ಎಷ್ಟು ಸಲ ಬೇಕಾದರೂ ಮಾಡಬಹುದು ಎಂದಿದ್ದೀರಿ. ನಾನು ಎಲ್ಲಿ ಬೇಕಾದರೂ ಜಪ ಮಾಡಬಹುದೆ?' ಶ್ರೀಮಾತೆ ಹೇಳಿದರು: 'ಹೌದು ಮಗೂ, ಎಲ್ಲಿ ಬೇಕಾದರೂ ಮಾಡಬಹುದು.' ಮತ್ತೆ ನಾನು ಅವರನ್ನು ಕೇಳಿದೆ. 'ನಾನು ಊಟ ಮಾಡುವಾಗ, ಅಥವಾ ಅಶುಚಿಯಿಂದ ಕೂಡಿದ ಪ್ರದೇಶದಲ್ಲಿ ಕೂಡ ಮಾಡಬಹುದೆ?' ಅವರು ತಮ್ಮ ಮಾತುಗಳಿಗೆ ವಿಶೇಷ ಒತ್ತು ನೀಡಿ ಹೇಳಿದರು: 'ಹೌದು, ಅಶುಚಿಯಾದ ಸ್ಥಳದಲ್ಲೂ ಮಾಡಬಹುದು. ಅದರ ಬಗ್ಗೆ ನೀನು ಹೆಚ್ಚು ತಲೆಕೆಡಿಸಿಕೊಳ್ಳಬೇಕಾಗಿಲ್ಲ, ಮಗೂ.' ಅವರು ತಮ್ಮ ಕೈಯನ್ನು ನನ್ನ ತಲೆಯ ಮೇಲಿಟ್ಟು, ಕಣ್ಣು ಮುಚ್ಚಿಕೊಂಡು ಕೆಲವು ಕ್ಷಣ ಮೌನವಾಗಿದ್ದರು. ಬಳಿಕ ತಮ್ಮ ಕೈಯಿಂದ ನನ್ನ ಗಲ್ಲವನ್ನು ಸ್ಪರ್ಶಿಸಿದರು. 'ಮತ್ತೆ ಬಾ ಮಗೂ' ಎಂದರು. ಅನಂತರ ನಾನು ಅಲ್ಲಿಂದ ಹೊರಟೆ. ಅವರು ತಮ್ಮ ಸರಳವಾದ ಮಾತುಗಳನ್ನು ಸರಳವಾಗಿ ಹೇಳಿದ್ದರು. ಬೇರೆಯವರಿಗೆ ಅದು ಸಾಮಾನ್ಯವಾಗಿ ಕಂಡುಬರಬಹುದೇನೋ. ಆದರೆ ಅವು ನನಗೆ ಜೀವನದಲ್ಲಿ ಉಂಟಾಗುವ ಗಂಭೀರ ಏರಿಳಿತಗಳಲ್ಲಿ ಸ್ಫೂರ್ತಿಯ ಚಿಲುಮೆಯಾಗಿವೆ. ಅವರು ನನಗೆ ನೀಡಿದ ಭರವಸೆ ವೈಯಕ್ತಿಕವಾಗಿ ಅಗಾಧ ಶಾಂತಿ ಹಾಗೂ ಧೈರ್ಯದ ಮೂಲವಾಗಿದೆ. ನನಗೆ ದುಃಖ, ಹತಾಶೆಗಳುಂಟಾದಾಗ, ಅಥವಾ ಜೀವನದಲ್ಲಿ ಆಘಾತವುಂಟಾಗಿ, ಕಠಿಣ ಸಂದರ್ಭಗಳನ್ನು ಎದುರಿಸಬೇಕಾಗಿ ಬಂದಾಗ ಇದೇ ನನಗೆ ಅಸಾಧಾರಣ ಸ್ಥೈರ್ಯವನ್ನು ನೀಡುವುದು. ಈ ಸಣ್ಣ ಒಂದು ಸ್ಮೃತಿಲೇಖನದಿಂದ ಸ್ಪಷ್ಟವಾಗುವ ಸಂಗತಿಯೇನೆಂದರೆ, ಶ್ರೀಮಾತೆಯವರ ಅಸೀಮ ಪ್ರೀತಿಯು ನನ್ನಂತಹ ವ್ಯಕ್ತಿಗಳನ್ನು ಅವರ ಪಾದಪದ್ಮಗಳಿಗೆ ಶಾಶ್ವತವಾಗಿ ಬಂಧಿಸಿದೆ — ಎಂದು. ಪರಿಶುದ್ಧತೆ, ಪ್ರಾಮಾಣಿಕತೆ, ವ್ಯಾಕುಲತೆಯಿಂದ ಕೂಡಿದ ಭಕ್ತಿ ಹಾಗೂ ಸಾಕ್ಷಾತ್ಕಾರಕ್ಕಾಗಿ ಅತೀವ ಕಾತರತೆ — ಇವೇ ಅವರನ್ನು ಹೆಚ್ಚು ಸಂತೋಷಪಡಿಸುವುದು : ಇದು ನನ್ನ ವೈಯಕ್ತಿಕ ಅನುಭವವಾಗಿದೆ.*

---

** ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ೧೯೫೫ರ ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾದ ಲೇಖನ. ಇದರ ಬಂಗಾಳಿ ಅನುವಾದ 'ಮಾಯೇರ್ ಪದಪ್ರಾಂತೇ' ಗ್ರಂಥದ ೩ನೇ ಸಂಪುಟದಲ್ಲಿ ಪ್ರಕಟವಾಗಿದೆ. (-ಅನು)*

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಅಮ್ಮಾ, ನನಗೆ ಧ್ಯಾನ ಚೆನ್ನಾಗಿ ಆಗುವಂತೆ, ಭಗವಂತನಲ್ಲೇ ಮನಸ್ಸು ಮಗ್ನವಾಗುವಂತೆ ಆಶೀರ್ವಾದ ಮಾಡಿ.

**ಶ್ರೀಮಾತೆ :** ಯಾವಾಗಲೂ ಸದಸದ್ವಿಚಾರ ಮಾಡು.

**ಶಿಷ್ಯ :** ಅಮ್ಮಾ, ಕುಳಿತುಕೊಂಡೇ ನಾನು ವಿಚಾರ ಮಾಡಬಲ್ಲೆ. ಆದರೆ ಕೆಲಸ ಮಾಡುವಾಗ ವಿಚಾರ ಸಾಧ್ಯವಾಗುತ್ತಿಲ್ಲ. ಬೇರೆಲ್ಲೋ ಮನಸ್ಸು ಹೋಗಿಬಿಡುತ್ತದೆ. ಆ ಸಮಯದಲ್ಲೂ ನನಗೆ ಸರಿಯಾಗಿ ವಿಚಾರ ಮಾಡುವಂತೆ ಶಕ್ತಿ ನೀಡಿ.

**ಶ್ರೀಮಾತೆ :** ಮಗೂ, ಶ್ರೀರಾಮಕೃಷ್ಣರು ನಿನ್ನನ್ನು ರಕ್ಷಿಸುತ್ತಾರೆ.

ಅನಂತರ ಶ್ರೀಮಾತೆ, ''ನಿನ್ನಲ್ಲಿ ಜ್ಞಾನ, ಚೈತನ್ಯವುಂಟಾಗಲಿ'' ಎಂದರು.

ಬೇರೊಬ್ಬ ಸಂನ್ಯಾಸೀ ಭಕ್ತನಿಗೆ ಅವರೆಂದರು, ''ನೀವೆಲ್ಲ ಸಂನ್ಯಾಸಿಗಳು, ನೀವು ಗೃಹಸ್ಥರೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳುವುದು ಅತ್ಯಂತ ಕೆಟ್ಟದ್ದು. ವಿಷಯಾಸಕ್ತರಾದ ಮಂದಿಯ ಗಾಳಿ ತಗಲಿದರೂ ಒಳ್ಳೆಯದಲ್ಲ.''

*'ಶ್ರೀಶಾರದಾದೇವಿ ವಚನವೇದ', ಪು.೩೨೨*